ಈ) ಉದ್ಭವಿಸುವದಿಲ್ಲ

ಉ) ಗುಲ್ಬರ್ಗಾ ಜಿಲ್ಲಾಧಿಕಾರಿಗಳು ವರದಿ ಮಾಡಿರುವಂತೆ ಸೇಡಂ ಉಪ ವಿಭಾಗಾಧಿಕಾರಿಗಳು ಸೇಡಂ ಗುಲ್ಬರ್ಗಾ ತಿರುವು ರಸ್ತೆಯ ಮೇಲೆ ೨೭ ಚೀಲ ಅಕ್ಕಿಯನ್ನು ಹಾಕಿದ್ದುದರಿಂದ ಮತ್ತು ಇದರ ಸಂಬಂಧ ಆಗ ಯಾರೂ ಯಾವ ದಾಖಲೆ ಹಾಜರು ಪಡಿಸದ ಕಾರಣ ಇದು ನ್ಯಾಯಬೆಲೆ ಅಂಗಡಿ ಅಥವಾ ಜವಾಹರ ರೋಜಗಾರ ಯೋಜನೆಗೆ ಸಂಬಂಧಿಸಿರಬಹುದೆಂಬ ಸಂಶಯ ಬಂದ ಕಾರಣ ಸದರಿ ಅಕ್ಕಿಯನ್ನು ಜಪ್ತು ಮಾಡಲಾಗಿದೆ ವಿಚಾರಣೆ ನಡೆಯುತ್ತಿದೆ

ಊ) ವರದಿ ತರಿಸಿ ಸೂಕ್ತ ಕ್ರಮ ಕೈಕೊಳ್ಳಲಾಗುವದು

ವಿಷಯ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರದಲ್ಲಿ ಕಡಿತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೯ (೧೭೪೪)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನಸಾಮಾನ್ಯರಿಗೆ ತೊಂದರೆಯಿದ್ದಾಗ ಬಸ್ಸುಗಳ ಸಂಚಾರವನ್ನು ನಿಲ್ಲಿಸಿದ್ದಕ್ಕೆ ಕಾರಣವೇನು ?

ಆ) ಸಿಬ್ಬಂದಿ ವರ್ಗಕ್ಕೆ ಬಸ್ ನಿಲುಗಡೆಯಿಂದ ತಲೆದೋರಿರುವ ಹೆಚ್ಚಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಆಜೀಜ ಸೇಠ (ಸಾರಿಗೆ ಸಚಿವರು) :- ಅ) ಇಂಧನ ಪೂರೈಕೆ ಕಡಿತದ ಕಾರಣ ತಾತ್ಕಾಲಿಕವಾಗಿ ವಾಹನಗಳ ಕಾರ್ಯಾಚರಣೆಯನ್ನು ಕಡಿಮೆ ಮಾಡಲಾಗಿದೆ

ಆ) ವಿಶೇಷವಾಗಿ ಕಾರ್ಖಾನೆ ಮತ್ತು ಕಛೇರಿಗಳಿಗೆ ಹೋಗುವ ವೇಳೆಯಲ್ಲಿ ಎಲ್ಲಾ ಸಾರಿಗೆ ಸೇವೆಗಳನ್ನು ಓಡಿಸಲಾಗುತ್ತಿದ್ದು ಅವುಗಳ ಕಾರ್ಯಾಚರಣೆಯನ್ನು ಮುಂದುವರಿಸಲಾಗುವದು

ವಿಷಯ :-ಉಡುಪಿ ಜಿಲ್ಲೆ ರಚನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :-೬೮೧ (೧೮೧೫)

ಶ್ರೀ ಪಿ. ಬಸವರಾಜ (ಬ್ರಹ್ಮಾವರ) :-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಕೇಂದ್ರವಾಗಿ ಉಳ್ಳ 'ಉಡುಪಿ ಜಿಲ್ಲೆ ರಚನೆ' ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಈ ವರೆಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಆ) ಹೌದು

ಆ) ಜಿಲ್ಲಾ ಪುನರ್ವಿಂಗಡನೆಗಳ ಬಗ್ಗೆ ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದೆ.

ವಿಷಯ :—ಮಂಡ್ಯ ತಾಲೂಕು ಕಛೇರಿ ಕಟ್ಟಡದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೨ (೧೧೯೬).

ಶ್ರೀಯುತ ಎಂ. ಎಸ್. ಆತ್ಮಾನಂದ (ಮಂಡ್ಯ):—

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) ಮಂಡ್ಯ ತಾಲ್ಲೂಕು ಕಛೇರಿ ಕಟ್ಟಡ ಶಿಥಿಲ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕಛೇರಿಯನ್ನು ಸ್ಥಳಾಂತರಿಸುವುದಕ್ಕಾಗಲಿ ಅಥವಾ ಹೊಸ ಕಟ್ಟಡ ನಿರ್ಮಿಸುವುದಕ್ಕಾಗಲಿ ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :—

ಅ) ಹೌದು

ಆ) ತಾಲ್ಲೂಕು ಕಛೇರಿ ಆವರಣದ ಪ್ರದೇಶವು ೨.೩೩ ಎಕರೆಗಳಿಂದ ಕೂಡಿದ್ದು ಇದನ್ನು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಿದರೆ ಅದು ಒಂದು ದೊಡ್ಡ ವ್ಯಾಪಾರ ಸಂಕೀರ್ಣ ಕಟ್ಟುವುದಾಗಿಯೂ ಹಾಗೂ ತಾಲ್ಲೂಕು ಕಛೇರಿಯನ್ನು ಮುಫತ್ತಾಗಿ ಕಟ್ಟುವುದಾಗಿಯೂ ತಿಳಿಸಿರುವುದರಿಂದ ಇದು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. ಈ ಮಧ್ಯೆ ಮಂಡ್ಯ ನಗರದಲ್ಲಿರುವ ಹಳೆಯ ಆರ್‌ಟಿಓ ಕಛೇರಿ ಕಟ್ಟಡವನ್ನು ರಿಪೇರಿಗೊಳಿಸಿ ತಾತ್ಕಾಲಿಕವಾಗಿ ಮಂಡ್ಯ ತಾಲ್ಲೂಕು ಕಛೇರಿಯನ್ನು ಈ ಕಟ್ಟಡಕ್ಕೆ ವರ್ಗಾಯಿಸಲು ಉದ್ದೇಶಿಸಲಾಗಿದೆ.

ವಿಷಯ :—ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ— ೬೮೩ (೧೦೮೮).